**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ**

**ಅಸಲು ದಾವಾ ಸಂ.60/2020 P.W.-2**

ದಿನಾಂಕಃ 17-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ಸಾಕ್ಷಿಯು ನಿಪಿ-11 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-12 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-13 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ವಿ ಎ ವಕೀಲರಿಂದ ಃ-

ಹಾದಿಕೆರೆ ಗ್ರಾಮದ ಸರ್ವೆ ನಂ.172 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇರುತ್ತದೆ ಎಂದರೆ ಸಾಕ್ಷಿ 6 ಪೋಡಾಗಿರುತ್ತದೆ ಎಂದು ನುಡಿದಿರುತ್ತಾರೆ. ಸರ್ವೆ ನಂ.172 ನ್ನು ನಾವು ಸರ್ವೆ ಮಾಡಿರುತ್ತೇವೆ. ಸರ್ವೆ ನಂ.172 ನ್ನು ಸರ್ವೆ ಮಾಡಿ 6 ಪೋಡಿ ಮಾಡಿರುವ ಬಗ್ಗೆ ನಮ್ಮ ಮಹಜರ್ ನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಸರ್ವೆ ನಂ.172/1 ರಲ್ಲಿ 7 ಗುಂಟೆ ಯನ್ನು ಸರ್ವೆ ಮಾಡಿದ್ದು, ಅದರ ಬಗ್ಗೆ ನಮೂದು ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. 172 ನೇ ಸರ್ವೆ ನಂಬರನ್ನು ಅಳತೆ ಮಾಡಿ ಗಡಿ ಗುರುತಿಸಿರುವ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.172 ರಲ್ಲಿ ಒಟ್ಟು ಎಷ್ಟು ಎಕರೆ ಇದೆ ಎಂದು ದಾಖಲಾತಿಯನ್ನು ಪರಿಶೀಲಿಸಿರುತ್ತಿರಾ

ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.172 ರಲ್ಲಿಪಶ್ಚಿಮ ದಿಕ್ಕಿನಲ್ಲಿ ಹಾದಿಕೆರೆ ಗ್ರಾಮದಿಂದ ರಾಗಿ ಬಸಪ್ಪನಹಳ್ಳಿಗೆ ಹೋಗಲು ಮುಖ್ಯಬ ದಾರಿ ಇರುತ್ತದೆ ಎಂದರೆ ಸಾಕ್ಷಿ ನಾವು ಸರ್ವೆ ಮಾಡಿದ ಸಮಯದಲ್ಲಿ ಕಾಲುದಾರಿ ಕಂಡುಬಂದಿರುತ್ತದೆ ಎಂದು ನುಡಿದಿರುತ್ತಾರೆ. ನಾವು ಸರ್ವೆಯನ್ನು ದಿ 27-03-2019 ರಲ್ಲಿ ಮಾಡಿರುತ್ತೇವೆ. ನಾನು ಸರ್ವೆ ನಂ.172/1 ನ್ನು ಮಾತ್ರ ಅಳತೆ ಮಾಡಿ ಹದ್ದುಬಸ್ತು ಮಾಡಿದ್ದು, ಅದರ ಬಗ್ಗೆ ಮಾತ್ರ ನಕ್ಷೆ ತಯಾರಿಸಿ ಸಲ್ಲಿಸಿರುತ್ತೇನೆ, ಅದರಲ್ಲಿ ಯಾವುದೇ ದಾರಿ ಅಥವಾ ಖರಾಬು ಕಂಡುಬಂದಿರುವುದಿಲ್ಲ. ನೀವು ಸಂಪೂರ್ಣವಾಗಿ ಸರ್ವೆ ನಂ.172 ನ್ನು ಸರ್ವೆ ಮಾಡದೇ ವಾದಿಯ ಹೇಳಿಕೆ ಮೇರೆಗೆ ಕೇವಲ ಸರ್ವೇ ನಂ.172/1 ನ್ನು ಅಳತೆ ಮಾಡಿ ವಾದಿಗೆ ಸಹಾಯವಾಗುವಂತೆ ಸ್ಕೆಚ್ ತಯಾರಿಸಿರುತ್ತಿರಾ ಎಂದರೆ ಸರಿಯಲ್ಲ. ಸರ್ವೆ ನಂ.172/1 ರ ಜಮೀನನ್ನು ಅಜುಬಾಜಿನವರು ಒತ್ತುವರಿ ಮಾಡಿರುವ ಬಗ್ಗೆ ಸಂಪೂರ್ಣವಾ ತಿಳಿಯಲು ಅವರ ಜಮೀನು ಸಹ ಅಳತೆ ಮಾಡುವ ಅವಶ್ಯಕತೆ ಇರುತ್ತದೆ ಎಂದರೆ ಸಾಕ್ಷಿ ನಾವು ಕೇವಲ ಸರ್ವೆ ನಂ.172/1 ನ್ನು ಅಳತೆ ಮಾಡಿದ್ದು, ಬೇರೆ ಜಮೀನನ್ನು ಅಳತೆ ಮಾಡುವ ಅವಶ್ಯಕತೆ ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ. ಸರ್ವೇ ನಂ.172/1 ಜಮೀನನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುವುದಿಲ್ಲ, ನೀವು ಸುಳ್ಳು ನಕ್ಷೆ ತಯಾರಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಸರ್ವೆ ನಂ.172/1 ಜಮೀನಿನಲ್ಲಿ ವಾದಿಯು 3 ಗುಂಟೆ ಸ್ವಾಧೀನದಲ್ಲಿರುತ್ತಾರೆ. ವಾದಿ ತಾನು 7 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತೇನೆಂದು ತಿಳಿಸಿರುತ್ತಾರೆಂದರೆ ಸಾಕ್ಷಿ ನಾವು ನಮ್ಮ ಸರ್ವೆ ಪ್ರಕಾರ ಅಳತೆ ಮಾಡಿ ದಾಖಲಾತಿ ನೀಡಿರುತ್ತೇವೆ ಎಂದು ನುಡಿದಿರುತ್ತಾರೆ. ಸರ್ವೆ ನಂ.171 ಪ್ರತಿವಾದಿಯ ಜಮೀನನ್ನು ಅಳತೆ ಮಾಡದೇ ಒತ್ತುವರಿ ಮಾಡಿರುವ ಬಗ್ಗೆ ಮಾಹಿತಿ ನೀಡಲು

ಬರುವುದಿಲ್ಲ ಎಂದರೆ ಸಾಕ್ಷಿ ಅದು ಸಾಧ್ಯವಿಲ್ಲ ಎಂದು ನುಡಿದಿದ್ದು, ನಮಗೆ ಕೇವಲ ಸರ್ವೆ ನಂ.172/ 1 ನ್ನು ಅಳತೆ ಮಾಡಲು ತಿಳಿಸಿದ್ದು, ಅದನ್ನು ಮಾತ್ರ ಅಳತೆ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಸರ್ವೆ ನಂ.171, 172 ಜಮೀನುಗಳನ್ನು ಸಂಪೂರ್ಣ ವಾಗಿ ಅಳತೆ ಮಾಡಿದ ನಂತರ ಒತ್ತುವರಿ ಬಗ್ಗೆ ತಿಳಿದು ಬರುತ್ತದೆ ಎಂದರೆ ಸಾಕ್ಷಿ ನಾನು ಸರ್ವೆ ನಂ.171 ನ್ನು ಅಳತೆ ಮಾಡಿರುವುದಿಲ್ಲ ಪ್ರತಿವಾದಿಗಳು ಅಳತೆ ಮಾಡಿಸಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ನಾನು ಸರ್ವೆ ಮಾಡುವ ಸಮಯದಲಿಲ ಅಜುಬಾಜಿನವರು ಹಾಜರಿದ್ದು, ಗಂಗಮ್ಮನ ಮಗ ಮಹಜರ್ ಗೆ  ಸಹಿ ಹಾಕಲು ನಿರಾಕರಿಸಿರುತ್ತಾರೆ. ನೀವು ಅಳತೆ ಕಾರ್ಯ ಸರಿಯಾಗಿ ಮಾಡದ ಕಾರಣ ಅವರು ಸಹಿ ಹಾಕಲು ನಿರಾಕರಿಸಿರುತ್ತಾರೆಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ರವರು,  ತರೀಕೆರೆ.